

ಚಿತ್ರ ಕೃಪೆ: ಅಲೀಸ್ ಜ್ಯುವೆಲರ್ಸ್, ಬೆಂಗಳೂರು

ಬಳೆಗಳು ಇಂದಿಗೂ ಜನಪ್ರಿಯ. ಹವಳ, ಮುತ್ತು ಕೂರಿಸಿದ ಬಳೆಗಳನ್ನು ಕೂಡಾ ಮಧ್ಯೆ ಮಧ್ಯೆ ಹಾಕಿಕೊಳ್ಳಬಹುದು. ದಪ್ಪನೆಯ ಆ್ಯಂಟಿಕ್ ಅಥವಾ ದೇಗುಲದ ಒಡವೆಗೆ ಸೇರಿದ ಬಳೆಯಾದರೆ ಒಂದೊಂದನ್ನೇ ಹಾಕಿಕೊಂಡರೂ ಆಡಂಬರವಾಗಿ ಕಣ್ಣುಕುತ್ತದೆ. ಕಿವಿಗೆ ಗಂಟೆಯಾಕಾರದ ಝುಮ್ಕಾ ಈಗ ಮತ್ತೆ ಫ್ಯಾಷನ್ ಎನಿಸಿಕೊಂಡಿದೆ. ಅದಕ್ಕೆ ಕೆನ್ನೆ ಸರಪಣಿ ಜೋಡಿಸಿಕೊಳ್ಳಬಹುದು.

ಮದುವೆ ಆಭರಣಗಳಲ್ಲಿ ಚಿನ್ನದ ಒಡವೆಗಳ ಮಧ್ಯೆ ಹೊಳೆಯುವ ವಜ್ರದಾಭರಣಗಳು ಇಂದಿಗೂ ಮುಂದಿನ ಸಾಲಿನಲ್ಲಿ ನಿಲ್ಲುತ್ತವೆ. ಅದರಲ್ಲೂ ಅನ್‌ಕಟ್ ಪೋಲ್ಕಿ ವಜ್ರಗಳನ್ನು ಹುದುಗಿಸಿದ ಚಿನ್ನದ ಒಡವೆಗಳು ವಧುವಿನ ಶೃಂಗಾರವನ್ನು ಪೂರ್ಣಗೊಳಿಸುತ್ತವೆ. ಪೋಲ್ಕಿ ಆಭರಣಗಳಿಗೆ ವಜ್ರವಲ್ಲದೆ ಮುತ್ತು, ಅಮೂಲ್ಯ ಹರಳುಗಳನ್ನು ಜೋಡಿಸಿದರೆ ಅದರ ಸೊಬಗೇ ಬೇರೆ.

'ಇತ್ತೀಚೆಗೆ ವಜ್ರದ ಆಭರಣಗಳ ಟ್ರೆಂಡ್ ಜಾಸ್ತಿ ಆಗಿದೆ. ಒಂದಾದರೂ ವಜ್ರದ ಒಡವೆಯ ಸೆಟ್ ಇರಲಿ ಎಂಬುದು ಹುಡುಗಿಯರ ಬಯಕೆ. ಹಾಗೆಯೇ ಆ್ಯಂಟಿಕ್ ಆಭರಣಗಳ ಮೋಹವೂ ಜಾಸ್ತಿಯಾಗಿದೆ. ಅವುಗಳನ್ನು ತಯಾರಿಸುವವರ ಸಂಖ್ಯೆಯೂ ಹೆಚ್ಚಾಗಿದೆ. ಅಪ್ಪಟ ಮಾಣಿಕ್ಯ, ಪಚ್ಚೆ ಹರಳುಗಳನ್ನು ಕೂರಿಸಿದ ಆಭರಣಗಳತ್ತ ಆಕರ್ಷಣೆಯೂ ನವವಧುಗಳಿಗೆ' ಎನ್ನುವ ಶರತ್‌ಕುಮಾರ್, 'ಒಟ್ಟಿನಲ್ಲಿ ಮದುವೆಯ ದಿನ ಖುಷಿಯಾಗಿರಬೇಕು ಎಂಬ ಟ್ರೆಂಡ್ ಈಗಿನವರದ್ದು' ಎನ್ನುತ್ತಾರೆ.



**ಮದುವೆ ಆಭರಣಗಳಲ್ಲಿ ಚಿನ್ನದ ಒಡವೆಗಳ ಮಧ್ಯೆ ಹೊಳೆಯುವ ವಜ್ರದಾಭರಣಗಳು ಇಂದಿಗೂ ಮುಂಚೂಣಿಯಲ್ಲಿ ನಿಲ್ಲುತ್ತವೆ. ಅದರಲ್ಲೂ ಅನ್‌ಕಟ್ ಪೋಲ್ಕಿ ವಜ್ರಗಳನ್ನು ಹುದುಗಿಸಿದ ಚಿನ್ನದ ಒಡವೆಗಳು ವಧುವಿನ ಶೃಂಗಾರವನ್ನು ಪೂರ್ಣಗೊಳಿಸುತ್ತವೆ.**

## ಥೀಮ್ ಮದುವೆ

ಮದುವೆ ಎಂದರೆ ಯೋಜನೆಗಳನ್ನು ಹಾಕಿಕೊಳ್ಳಬೇಕು, ನಿಗದಿತ ಸಮಯದೊಳಗೆ ಅವುಗಳನ್ನು ಜಾರಿಗೆ ತರಬೇಕು. ಇವೆಲ್ಲ ಕಷ್ಟಕರವೇ. ಅದಕ್ಕೇ ಅಲ್ಲವೇ ಮದುವೆ ಮಾಡಿ ನೋಡು.. ಎಂಬ ಗಾದೆ ಹುಟ್ಟಿಕೊಂಡಿದ್ದು. ಮದುವೆ– ಆರತಕ್ಷತೆಗಳು ನಡೆಯುವ ಸ್ಥಳ ಹುಡುಕುವುದು, ಬಂಧುಗಳು– ಸ್ನೇಹಿತರನ್ನು ಆಹ್ವಾನಿಸುವುದು ಮೊದಲಾದ ಕೆಲಸಗಳ ಮಧ್ಯೆ ವಧು– ವರರ ಕೋರಿಕೆಯ ಬಟ್ಟೆ, ಒಡವೆಗಳ ಆಯ್ಕೆ ಮತ್ತು ಖರೀದಿ ಇನ್ನೂ ಕಷ್ಟ. ಎಲ್ಲವೂ ಸರಿಯಾಗಿದ್ದರೆ ತಾನೇ ಆಚರಣೆ– ಸಂಪ್ರದಾಯಗಳ ವಾತಾವರಣ ಸೃಷ್ಟಿಯಾಗುವುದು. ಇವುಗಳ ಮಧ್ಯೆ ಇತ್ತೀಚೆಗೆ 'ಥೀಮ್' ಮದುವೆಗಳು ಬೇರೆ ಹುಟ್ಟಿಕೊಂಡಿವೆ.

ಸೆಲೆಬ್ರಿಟಿಗಳು ಮಾತ್ರವಲ್ಲ, ವಧು–ವರ ಇಬ್ಬರೂ ಕೈತುಂಬ ದುಡಿಯುವವರಾಗಿದ್ದರೆ, ಸೀಮಿತ ಆಹ್ವಾನಿತರನ್ನು ಸೇರಿಸಿಕೊಂಡು ಈ ಥೀಮ್ ಮದುವೆ ಮಾಡಿಕೊಳ್ಳುವುದಿದೆ. ಮದುವೆ ಹಳೆಯ ಸಂಪ್ರದಾಯಗಳನ್ನು ಒಳಗೊಂಡಿರಬೇಕೋ, ಕ್ಲಾಸಿಕ್ ಆಗಿರಬೇಕೋ ಅಥವಾ ಅಲೆಮಾರಿಗಳ ತರಹ ಸರಳವಾಗಿದ್ದು, ಸಂಪ್ರದಾಯಗಳ ಗೊಡವೆಯಿಲ್ಲದೆ ನಡೆಯಬೇಕೋ.. ಇವನ್ನೆಲ್ಲ ತೀರ್ಮಾನಿಸಿ ಎಲ್ಲವನ್ನೂ ಅಣಿಗೊಳಿಸುವುದಕ್ಕೆ 'ವೆಡ್ಡಿಂಗ್ ಪ್ಲ್ಯಾನರ್'ಗಳಿದ್ದರೂ ಕೆಲವರು ತಾವು ತಾವೇ ಮಾಡಿಕೊಳ್ಳುವುದಿದೆ. ಅಂತಹವರಿಗೆ ಈ ಮದುವೆ ಎನ್ನುವುದು ಜೀವನಶೈಲಿ, ಫ್ಯಾಷನ್, ಕಲೆ, ತಂತ್ರಜ್ಞಾನ, ಸಂಸ್ಕೃತಿಗಳ ಮಿಶ್ರಣ. ಹೀಗಾಗಿ ಖರೀದಿ ಒಂದೇ ಸೂರಿನಡಿ ಇದ್ದರೆ ಇನ್ನೂ ಚೆನ್ನ ಅಲ್ಲವೇ!

ಅದಕ್ಕೆಂದೇ ಕೆಲವು ಬ್ರ್ಯಾಂಡಿನ ಆಭರಣದ ಮಳಿಗೆಗಳು ಮದುವೆ ಸೀರೆಗಳ ಮಳಿಗೆಗಳನ್ನೂ ತೆರೆದಿದ್ದು, ಗ್ರಾಹಕರು ಇನ್ನೊಂದು ಕಡೆ ತಡಕಾಡಬೇಕಿಲ್ಲ. ಜವಳಿ– ಒಡವೆ ಖರೀದಿಯನ್ನು ಒಟ್ಟಿಗೆ ಮುಗಿಸಿ ಮಳಿಗೆಯಿಂದ ಹೊರಗೆ ಕಾಲಿಡುವ ಸವಲತ್ತನ್ನು ಒದಗಿಸಿವೆ. ಆಹ್ವಾನಿತರ ಡ್ರೆಸ್ ಕೋಡ್ ಕೂಡಾ ನಿರ್ಧರಿಸಿ ಅವುಗಳ ಖರೀದಿಗೂ ಇಂತಹ ಮಳಿಗೆಗಳು ಅವಕಾಶ ಒದಗಿಸಿವೆ.